**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.118/2019**

ಪ್ರಾ.ಸಾ. 15

ಚಾ.ಸಾ. 24

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 24.12.2025**

| | |
|---|---|
| ಸಾಕ್ಷಿದಾರರ ಹೆಸರು | ಪುಟ್ಟಸ್ವಾಮಿ |
| ತಂದೆಯ ಹೆಸರು | ಹೆಚ್.ಮಲ್ಲಯ್ಯ |
| ವಯಸ್ಸು | 60 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ತೊಪ್ಪನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ರಿಂದ ಚಾಸಾ.18 ಗೊತ್ತು, ಅವರು ನಮ್ಮ ಊರಿನವರು. ಈ ಪ್ರಕರಣದ ಆರೋಪಿಗಳೂ ಕೂಡ ಗೊತ್ತು. ಅವರು ನಮ್ಮ ಊರಿನವರು. ನಾನು ತೊಪ್ಪನಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ ಮತ್ತು ಪಂಚಾಯಿತಿ ಸದಸ್ಯನಾಗಿದ್ದೆ. 2015 ರಲ್ಲಿ ನಾನು ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ ಕೋಟಿ ಮುತ್ತುರಾಜು ವಿರುದ್ಧ ಗೆದ್ದಿದ್ದೇನೆ. ಅದೇ ರೀತಿ ನಾನು ತೊಪ್ಪನಹಳ್ಳಿಯ ಸಹಕಾರ ಸಂಘದ ನಿರ್ದೇಶಕನಾಗಿದ್ದೆ. 2015 ರ ಗ್ರಾಮ ಪಂಚಾಯಿತಿ ಚುನಾವಣೆಯ ಬಳಿಕ ಕೂಡ ನಮ್ಮ ಸಂಬಂಧ ಆರೋಪಿಗಳ ಜೊತೆ ಚೆನ್ನಾಗಿತ್ತು. ಕಾರ್ತಿಕ್ ಎಂಬ ಹುಡುಗ ನಮ್ಮ ಪಂಚಾಯಿತಿಯ ವಾಟರ್ ಮ್ಯಾನ್ ಆಗಿದ್ದ. ಅವನು ಸರಿಯಾಗಿ ನೀರು ಸರಬರಾಜು ವ್ಯವಸ್ಥೆ ನೋಡಿಕೊಳ್ಳದೇ ಊರಿನಲ್ಲಿ ಗಲಾಟೆಯಾಗುತ್ತಿತ್ತು. ಆಗ ಅವನನ್ನು ತೆಗೆದುಹಾಕಿ ನಮ್ಮ ಊರಿನ ಕುಳ್ಳೇಗೌಡರ ಮಗ ಮುತ್ತುರಾಜುವನ್ನು ವಾಟರ್ ಮ್ಯಾನ್ ಆಗಿ

ಪಂಚಾಯಿತಿಯವರು ನೇಮಿಸಿದರು. ಆ ಸಮಯದಲ್ಲಿ ಕಾಂಗ್ರೆಸ್ ಪಕ್ಷದಿಂದ ಬೆಂಬಲಿತ ಸದಸ್ಯರ ಪಂಚಾಯತ್ ಆಡಳಿತ ಇತ್ತು. ಶಿವರಾಮನ ಹೆಂಡತಿ ಶೋಭಾ ಎಂಬುವವರು ನಮ್ಮ ಕೆ.ಹೊನ್ನಲಗೆರೆ ಪಂಚಾಯಿತಿಯ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ನಮ್ಮ ಊರಿನ ಕುಂಟ ರಾಜು, ಶಂಕರ, ಮುತ್ತೇಶ ಎಂಬುವವರು ಪಂಚಾಯಿತಿಗೆ ತಿಳಿಸದೇ ಪಂಚಾಯತ್ ನಲ್ಲಿಯಿಂದ ತಮ್ಮ ಮನೆಗಳಿಗೆ ನಲ್ಲಿ ಸಂಪರ್ಕ ಪಡೆದಿದ್ದರು. ಅದನ್ನು ನೋಡಿ ಮುತ್ತುರಾಜು ನಮಗೆ ತಿಳಿಸಿದ. ನಾವು ಆಗ ಈ ವಿಚಾರವನ್ನು ವಿಚಾರಿಸುತ್ತೇವೆಂದು ಹೇಳಿದೆವು. ಇದನ್ನು ತಿಳಿದು ಕುಂಟರಾಜು ಕುಡಿದುಕೊಂಡು ಬಂದು ವಾಟರ್ ಮ್ಯಾನ್ ಮುತ್ತುರಾಜುಗೆ ಮತ್ತು ಪಂಚಾಯಿತಿ ಸದಸ್ಯರಿಗೆ ಬೈಯುತ್ತಿದ್ದ. ಒಂದು ದಿನ ಕುಂಟರಾಜು ಮುತ್ತುರಾಜುವಿನ ಮನೆಯ ಬಳಿ ಬಂದು ಬೆಳಗ್ಗೆ 5.30 ಗಂಟೆಗೆ ನೀರು ಬಿಡುತ್ತೀಯಾ ಯಾರು ನೀರು ಹಿಡಿಯುತ್ತಾರೆ, ನಿನ್ನ ಅಪ್ಪನಾ ಎಂದು ಬೈದು, ಗಲಾಟೆ ಮಾಡಿ ಮುತ್ತುರಾಜುಗೆ ಹೊಡೆದಿದ್ದ. ಅರಳೀಮರದ ಬಳಿ ಹೋಗಿ ನೀರು ಸರಬರಾಜು ಮಾಡುವ ಗೇಟ್ ವಾಲ್ ಮೇಲೆ ಕಲ್ಲು ಎತ್ತಿ ಹಾಕಿ ಒಡೆದು ಹಾಕಿದ್ದ. ಸದರಿ ಗೇಟ್ ವಾಲ್ ಬಳಿ ಕಾಂಗ್ರೆಸ್ ಪಕ್ಷದ ವತಿಯಿಂದ ಹಾಕಿದ್ದ ಬ್ಯಾನರ್ ಅನ್ನು ಹರಿದು ಹಾಕಿದ್ದ. ಅದನ್ನೂ ಕೂಡ ವಾಟರ್ ಮ್ಯಾನ್ ಮುತ್ತುರಾಜು ನಮಗೆ ಬಂದು ತಿಳಿಸಿದ. ಅದರ ಮಾರನೇ ದಿನ ನಾನು, ಪ್ರಸನ್ನ, ಜಗದೀಶ, ಶಿವರಾಮ ಕುಂಟರಾಜುವಿನ ಮನೆಯ ಬಳಿ ಹೋಗಿ ಬುದ್ಧಿ ಹೇಳಿ ತಿಳಿ ಹೇಳಿದೆವು. ಶಿವರಾಮ ಪಿ ಡಿ ಓಗೆ ಗೇಟ್ ವಾಲ್ ಮುರಿದು ಹಾಕಿರುವುದನ್ನು ತೋರಿಸಿ, ದುರಸ್ತಿ ಮಾಡಲು ತಿಳಿಸಿ, ಮುಂದೆ ಈ ರೀತಿ ಮಾಡಿದರೆ ಪೊಲೀಸ್ ದೂರು ನೀಡುವಂತೆ ಹೇಳಿದ. ಪಿ ಡಿ ಓ ಗೇಟ್ ವಾಲ್ ಮುರಿದಿರುವುದನ್ನು ನೋಡಿ ಪಂಚಾಯಿತಿ ಕಡೆಯಿಂದ ದೂರು ನೀಡೋಣ ಎಂದು ಹೇಳಿದರು. ಆಗ ಶಿವರಾಮು ವಾಟರ್ ಮ್ಯಾನ್ ಮುತ್ತುರಾಜುವನ್ನು ಕರೆದು ಠಾಣೆಗೆ ದೂರು ನೀಡಿಸಿದರು. ಅದೇ ದಿನ ಕುಂಟರಾಜು ಮೇಲೆ ಪ್ರಕರಣ ದಾಖಲು ಆಯಿತು. ಅದೇ ದಿನ ಸಾಯಂಕಾಲ ವಾಟರ್ ಮ್ಯಾನ್ ಮುತ್ತುರಾಜು ತಂದೆ ಕುಳ್ಳೇಗೌಡ ದೂರು ಯಾಕೆ ನೀಡಿದ್ದು, ನ್ಯಾಯ ಮಾಡಿ ದಂಡ ಪಡೆಯಬಹುದಿತ್ತು ಎಂದು ಹೇಳಿದರು.

2. ಮರುದಿನ ಬೆಳಗ್ಗೆ ಕುಂಟರಾಜುನ ಮನೆಯ ಎದುರುಗಡೆಯಿಂದ ಪ್ರಸನ್ನ ಹುಚ್ಚೇಗೌಡರ ಮನೆಗೆ ಎಂದಿನಂತೆ ಹಾಲು ತರಲು ಹೋಗಿದ್ದ. ಆ ಸಮಯದಲ್ಲಿ ಕುಂಟರಾಜ, ಅವನ ಅಕ್ಕ ಲಕ್ಷ್ಮಿ, ಶಂಕರನ ಮಗ ಮುತ್ತುರಾಜ, ಕುಂಟರಾಜನ ತಾಯಿ ಪುಟ್ಟಲಿಂಗಮ್ಮ ಎಲ್ಲರೂ ಸೇರಿ ಪ್ರಸನ್ನನ ಮೇಲೆ ಗಲಾಟೆ ಮಾಡಿ ತಲೆಗೆ ಕಲ್ಲಿನಿಂದ ಹೊಡೆದು, ದೊಣ್ಣೆಯಿಂದ ಹೊಡೆದು ಹಲ್ಲೆ ಮಾಡಿದರು. ಆ ವಿಷಯ ತಿಳಿದು ನಾನು ಕುಂಟರಾಜುವಿನ ಮನೆಯ ಬಳಿ ಹೋದೆ. ಪ್ರಸನ್ನನನ್ನು ಜಗಳದಿಂದ ಬಿಡಿಸಿ ಮದ್ದೂರು

ಆಸ್ಪತ್ರೆಗೆ ಕರೆದುಕೊಂಡು ಹೋದೆ. ವೈದ್ಯರು ಜಿಲ್ಲಾ ಆಸ್ಪತ್ರೆಗೆ ಸಾಗಿಸಲು ಶಿಫಾರಸ್ಸು ನೀಡಿದರು. ನಾನು ಪ್ರಸನ್ನನನ್ನು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿ ನಮ್ಮ ಊರಿಗೆ ಹೋದೆ. ಈ ಬಗ್ಗೆ ಪ್ರಕರಣ ದಾಖಲು ಆಗಿ ಕುಂಟರಾಜು, ಲಕ್ಷ್ಮಿ, ಪುಟ್ಟಲಿಂಗಮ್ಮ, ಶಂಕರನ ಮಗ ಮುತ್ತುರಾಜು ರವರ ಮೇಲೆ ಮೊಕದ್ದಮೆ ದಾಖಲು ಆಯಿತು.

3. ಆ ದಿನ ಸಂಜೆ 6.30 ಗಂಟೆಗೆ ಅರಳೀ ಮರದ ಬಳಿ ಗಲಾಟೆಯಾಗುತ್ತಿತ್ತು. ನಾನು ಕುಂಟೇಗೌಡರ ಮುತ್ತನ ಜೊತೆ ಅರಳೀಮರದ ಬಳಿ ಹೋದೆ. ಅಲ್ಲಿ ಮುತ್ತುರಾಜು, ಹೇಮಂತ, ಸ್ವಾಮಿ, ಶಿವ, ಯೋಗರಾಜು ಮತ್ತು ಇತರರು ಇದ್ದರು. ಅವರ ಮೇಲೆ ನಮ್ಮ ಊರಿನವರಾದ ಚನ್ನೇಗೌಡ, ಮಹೇಂದ್ರ, ಕೋಟಿ ಮುತ್ತುರಾಜ, ಕೆಂಗಲ, ಮುತ್ತುರಾಜ, ಮಹದೇವ, ಕುಮಾರ, ಷಡ್ಡು ಮುತ್ತುರಾಜ, ಸಿಂಧು, ಕುಂಟರಾಜ ಇವರುಗಳು ದೊಣ್ಣೆ, ಮಚ್ಚು ಮತ್ತು ಕಬ್ಬಿಣದ ರಾಡುಗಳನ್ನು ಹಿಡಿದುಕೊಂಡು ಮುತ್ತುರಾಜು, ಹೇಮಂತ, ಸ್ವಾಮಿ, ಶಿವ, ಯೋಗರಾಜು ರವರಿಗೆ ಹೊಡೆಯುತ್ತಿದ್ದರು. ಆಗ ನಾನು ಅಲ್ಲಿ ಹೋಗಿ 1 ಮತ್ತು 2 ನೇ ಆರೋಪಿಗಳನ್ನು ಇಷ್ಟು ಜನ ಸೇರಿ ಹುಡುಗರನ್ನು ಹೊಡೆದು ಸಾಯಿಸುತ್ತೀರಾ ಎಂದು ಕೇಳಿದೆ. ಆಗ ಮಹೇಂದ್ರ ಇವರು ಚುನಾವಣೆಯಲ್ಲಿ ಗೆದ್ದು ಹೆಚ್ಚಿಕೊಂಡಿದ್ದಾರೆ, ಇವರನ್ನು ಹೊಡೆದು ಸಾಯಿಸಬೇಕೆಂದು ಹೇಳಿದ. ಅದೇ ಸಮಯಕ್ಕೆ 1 ನೇ ಆರೋಪಿ ಚನ್ನೇಗೌಡ ಮಚ್ಚು ತೆಗೆದುಕೊಂಡು ಚಾಸಾ.1 ರವರಿಗೆ ಮುಂದುಗಡೆಯಿಂದ ತಲೆಯ ಮೇಲೆ ಹೊಡೆದ. ಕುಮಾರ 8 ನೇ ಆರೋಪಿ ಕಬ್ಬಿಣದ ರಾಡಿನಿಂದ ಚಾಸಾ.1 ರವರಿಗೆ ತಲೆಯ ಹಿಂಭಾಗಕ್ಕೆ ಹೊಡೆದ. ಆಗ ಚಾಸಾ.1 ಕೆಳಗೆ ಬಿದ್ದ. ಆಗ ಚಾಸಾ.1 ರವರ ಚಿಕ್ಕಪ್ಪನ ಮಕ್ಕಳಾದ ಚಾಸಾ.2 ಮತ್ತು ಚಾಸಾ.3 ಹೇಮಂತ ಮತ್ತು ಶಿವು ಚಾಸಾ.1 ರವರನ್ನು ಎತ್ತಿಕೊಳ್ಳಲು ಹೋದಾಗ ಅವರ ಮೇಲೆ ಕೂಡ ಮುತ್ತುರಾಜು ಅಲಿಯಾಸ್ ಷಡ್ಡು, ಉಳಿದ ಇಬ್ಬರು ಮುತ್ತುರಾಜ ಹೊಡೆದರು. ಆಗ ಚಾಸಾ.1 ರವರನ್ನು ಚಾಸಾ.2 ಮತ್ತು ಚಾಸಾ.3 ರವರು ಬೈಕಿನಲ್ಲಿ ಕೂರಿಸಿಕೊಂಡು ಆಸ್ಪತ್ರೆಗೆ ಹೋದರು. ಚಾಸಾ.1 ರಿಂದ ಚಾಸಾ.5 ಮತ್ತು ಚಾಸಾ.10 ರವರ ಮೇಲೆ ಗಲಾಟೆ ಮಾಡಿದ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ 1 ನೇ ಆರೋಪಿ ಚನ್ನೇಗೌಡ, 10 ನೇ ಆರೋಪಿ ಮುತ್ತುರಾಜು ಅಲಿಯಾಸ್ ಷಡ್ಡು, 2 ನೇ ಆರೋಪಿ ಮಹೇಂದ್ರ, 14 ನೇ ಆರೋಪಿ ಪುಟ್ಟರಾಮು, 3 ನೇ ಆರೋಪಿ ಕೆಂಗಲ, 5 ನೇ ಆರೋಪಿ ಉಮೇಶ, 9 ನೇ ಆರೋಪಿ ಸಿಂಧು, 8 ನೇ ಆರೋಪಿ ಕುಮಾರ, 13 ನೇ ಆರೋಪಿ ಕುಂಟರಾಜು, 12 ನೇ ಆರೋಪಿ ಮುತ್ತುರಾಜ, 7 ನೇ ಆರೋಪಿ ಅರುಣ ರವರನ್ನು ನೋಡಿ ಗುರುತಿಸಿರುತ್ತಾರೆ. ಈ ಗಲಾಟೆ ನಡೆಯುವಾಗ ನಾನು ಯಾಕೆ ಗಲಾಟೆ ಮಾಡುತ್ತೀರಿ ಎಂದು ಕೇಳಿದಾಗ,

2 ನೇ ಆರೋಪಿ ಇವರನ್ನು ಸಾಯಿಸಬೇಕು, ಲೈಟ್ ಆಫ್ ಮಾಡಿರಿ ಎಂದು ಹೇಳಿದ. ಪಕ್ಕದಲ್ಲೇ ಲೈಟಿನ ಸ್ವಿಚ್ ಇತ್ತು ಮತ್ತು ಅದನ್ನು ಯಾರೋ ಸ್ವಿಚ್ ಆಫ್ ಮಾಡಿದರು. ಬಳಿಕ ನಾನು ಅಲ್ಲಿಂದ ಮನೆಯ ಕಡೆ ಹೊರಟೆ. ನಾನು ಈಗ ಹೇಳಿದ ಎಲ್ಲಾ ವಿಚಾರಗಳನ್ನು ತನಿಖೆ ಸಂದರ್ಭದಲ್ಲಿ ತನಿಖಾಧಿಕಾರಿಗಳ ಮುಂದೆ ಹೇಳಿದ್ದೇನೆ.

**ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

1. ಎಸ್ ಸಿ ನಂ.82/2017 ರಲ್ಲಿ ನಾನು 15 ನೇ ಆರೋಪಿ ಎಂದರೆ ಸರಿ. ಈ ಪ್ರಕರಣದ ಸಾಕ್ಷಿಗಳಾದ ಚಾಸಾ.1 ರಿಂದ ಚಾಸಾ.4 ಮತ್ತು ಚಾಸಾ.6 ರಿಂದ ಚಾಸಾ.10 ರವರು ಎಸ್ ಸಿ ನಂ.82/2017 ರಲ್ಲಿ ನನ್ನ ಜೊತೆ ಆರೋಪಿಗಳು ಎಂದರೆ ಸರಿ. ಆ ಪ್ರಕರಣದ 1 ನೇ ಆರೋಪಿ ಮುತ್ತುರಾಜು ಮತ್ತು 20 ನೇ ಆರೋಪಿ ಪ್ರಸನ್ನ ನನ್ನ ಅಕ್ಕನ ಮಕ್ಕಳು ಎಂದರೆ ಸರಿ. ಟಿ.ಕೆ.ಶಿವಣ್ಣ ಆ ಪ್ರಕರಣದ ಆರೋಪಿ ನನ್ನ ಅಕ್ಕನ ಗಂಡ ಎಂದರೆ ಸರಿ. ಆ ಪ್ರಕರಣದ 2 ನೇ ಆರೋಪಿ ರಾಮಲಿಂಗ, 3 ನೇ ಆರೋಪಿ ಜಗದೀಶ, 9 ನೇ ಆರೋಪಿ ಪ್ರತಾಪ, 16 ನೇ ಆರೋಪಿ ಶಿವಕುಮಾರ್ ರವರನ್ನು ಬಿಟ್ಟು, ಉಳಿದ ಆರೋಪಿಗಳು ನಮ್ಮ ಸಂಬಂಧಿಕರು ಎಂದರೆ ಸರಿ. ಸಾಕ್ಷಿ ಮುಂದುವರೆದು 3 ನೇ ಆರೋಪಿ ಜಗದೀಶ ಕೂಡ ನಮ್ಮ ಸಂಬಂಧಿ ಎಂದು ನುಡಿಯುತ್ತಾರೆ. ಈ ಪ್ರಕರಣದ ಚಾಸಾ.1 ರಿಂದ ಚಾಸಾ.4, ಚಾಸಾ.5, ಚಾಸಾ.11 ರವರು ನನ್ನ ಸಂಬಂಧಿಕರು ಎಂದರೆ ಸರಿ. ಚಾಸಾ.1 ರಿಂದ ಚಾಸಾ.5 ಮತ್ತು ಚಾಸಾ.11 ರವರ ಯಾರ ಮನೆಗಳೂ ನಮ್ಮ ತೊಪ್ಪನಹಳ್ಳಿ ಗ್ರಾಮದೊಳಗೆ ಇಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ಪ್ರಸನ್ನ ಇವರು ತೊಪ್ಪನಹಳ್ಳಿಯ ಅರಳೀಮರದಕಟ್ಟೆಯಿಂದ ಸುಮಾರು ಮುಕ್ಕಾಲು ಕಿ.ಮೀ. ದೂರದಲ್ಲಿರುವ ತೋಟದ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿ ಅಲ್ಲಿ ಕೂಡ ಇದ್ದಾರೆ ಮತ್ತು ಊರಿನಲ್ಲಿ ಕೂಡ ಅವರಿಗೆ ಮನೆ ಇದೆ ಎಂದು ನುಡಿಯುತ್ತಾರೆ. ಊರಿನಲ್ಲಿರುವ ಮನೆ ಅರಳೀಮರದಿಂದ 200 ಮೀಟರ್ ದೂರದಲ್ಲಿದೆ. ಚಾಸಾ.4 ಮತ್ತು ಚಾಸಾ.10 ಯೋಗರಾಜು ರವರು ಮದ್ದೂರಿನಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿ ಮದ್ದೂರಿನಲ್ಲಿಯೂ ಇದ್ದಾರೆ, ಜೊತೆಗೆ ತೊಪ್ಪನಹಳ್ಳಿಯ ಅರಳೀಮರದ ಬಳಿ ಕೂಡ ಇದ್ದಾರೆಂದು ನುಡಿಯುತ್ತಾರೆ. ಚಾಸಾ.4 ಮತ್ತು ಚಾಸಾ.10 ರವರು ತೊಪ್ಪನಹಳ್ಳಿಯಲ್ಲಿ ವಾಸ ಇಲ್ಲ,

ಮದ್ದೂರಿನಲ್ಲಿ ವಾಸ ಇದ್ದಾರೆಂದರೆ ಸರಿಯಲ್ಲ. ಅರಳೀಕಟ್ಟೆಯಿಂದ 100 ಅಡಿ ದೂರದಲ್ಲಿ 1, 2, 4 ನೇ ಆರೋಪಿಗಳ ಮನೆ ಇದೆ. ಉಳಿದವರ ಮನೆ ಊರಿನ ಒಳಗೆ ಇದೆ.

2. 4 ನೇ ಆರೋಪಿ ಕೋಟಿಯಾನೆ ಮುತ್ತುರಾಜು ಊರಿನಲ್ಲಿ ದೇವಸ್ಥಾನದ ಆಗುಹೋಗುಗಳನ್ನು ನೋಡಿಕೊಂಡು, ಊರಿನ ತಂಟೆ ತಕರಾರುಗಳನ್ನು ಪರಿಹರಿಸಿಕೊಂಡು ಇದ್ದ ಎಂದರೆ ಸರಿಯಲ್ಲ. ಚುನಾವಣೆ ಆದ ನಂತರ ಕೂಡ ಊರಿನ ಜನರ ತಂಟೆ ತಕರಾರುಗಳನ್ನು 4 ನೇ ಆರೋಪಿಯೇ ಮುಂದೆ ನಿಂತು ಬಗೆಹರಿಸುತ್ತಿದ್ದ ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ಮತ್ತು ಈ ಪ್ರಕರಣದಲ್ಲಿ ಸಾಕ್ಷಿಗಳಾಗಿ ನನ್ನ ಜೊತೆ ಆರೋಪಿಗಳಾಗಿರುವವರು ಕೋಟಿ ಮುತ್ತುರಾಜು ಮೇಲೆ ದ್ವೇಷ ಸಾಧಿಸುತ್ತಿದ್ದೆವು ಎಂದರೆ ಸರಿಯಲ್ಲ. ಕೋಟಿ ಮುತ್ತುರಾಜು ಊರಿನ ತಂಟೆ ತಕರಾರು ಬಗೆಹರಿಸುತ್ತಿದ್ದರಿಂದ ಮತ್ತು ಅವನ ಮನೆ ಅರಳೀಕಟ್ಟೆಯ ಬಳಿ ಇದುದ್ದರಿಂದ ಈ ನ್ಯಾಯಾಲಯದ ಈ ಪ್ರಕರಣದಲ್ಲಿ ಇರುವ ಆರೋಪಿಗಳೆಲ್ಲಾ ಅವನ ಜೊತೆ ಸಂಜೆ ಅರಳೀಕಟ್ಟೆಯ ಬಳಿ ಸೇರಿ ಮಾತುಕತೆ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಕೋಟಿ ಮುತ್ತುರಾಜು ಮತ್ತು ಅವನ ಕಡೆಯವರು ಅರಳೀಕಟ್ಟೆಯ ಬಳಿ ಸೇರುತ್ತಿದ್ದ ವಿಚಾರ ನನಗೆ ಮತ್ತು ನನ್ನ ಜೊತೆ ಇರುವ ಉಳಿದ ಆರೋಪಿಗಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿನಾಂಕ 25.12.2016 ರಂದು ನಮ್ಮ ಮನೆಯಲ್ಲಿ ಯಾವುದೇ ವಿಶೇಷ ಕಾರ್ಯಕ್ರಮ ಇರಲಿಲ್ಲ. ಆ ದಿನ ಎಸ್ ಸಿ ಸಂಖ್ಯೆ 82/2017 ರ ಆರೋಪಿಗಳು ನಮ್ಮ ಮನೆಯಲ್ಲಿ ಸೇರಿಲ್ಲ. ಅವರೆಲ್ಲಾ ಆಸ್ಪತ್ರೆಗೆ ಹೋಗಿ ಬಂದ ನಂತರ ಶಿವಣ್ಣನ ತೋಟದ ಮನೆಯಲ್ಲಿ ಮದ್ಯಾಹ್ನ 1.00 ಗಂಟೆಗೆ ಸೇರಿದ್ದರು ಎಂದರೆ ಸರಿಯಲ್ಲ. ಆ ರೀತಿ ಶಿವಣ್ಣನ ಮನೆಯಲ್ಲಿ ಸೇರಿದ ನಾವೆಲ್ಲಾ ಪ್ರಸನ್ನನಿಗೆ ಹಲ್ಲೆ ಮಾಡಿದ ಬಾಬ್ತು ಸೇಡು ತೀರಿಸಿಕೊಳ್ಳಲು ಈ ಪ್ರಕರಣದ ಆರೋಪಿಗಳ ಮೇಲೆ ಹಲ್ಲೆ ಮಾಡಲು ಸಂಚು ರೂಪಿಸಿದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಸಂಚು ರೂಪಿಸಿ ಆ ಪ್ರಕರಣದ 1 ರಿಂದ 3, 5 ರಿಂದ 7 ನೇ ಆರೋಪಿಗಳು ಹರಿತವಾದ ಆಯುಧಗಳನ್ನು ಹಿಡಿದುಕೊಂಡು ಹಾಗೂ 10 ಹಾಗೂ 11 ನೇ ಆರೋಪಿಗಳು ದೊಣ್ಣೆ ಹಾಗೂ ಕಬ್ಬಿಣದ ರಾಡುಗಳನ್ನು ಹಿಡಿದುಕೊಂಡು ಅರಳೀಕಟ್ಟೆಯ ಬಳಿ ಮಾತನಾಡುತ್ತಿದ್ದ ನಿಶ್ಯಸ್ತ್ರರಾದ ಈ ಪ್ರಕರಣದ ಆರೋಪಿಗಳ ಮೇಲೆ ಏಕಾಏಕಿ ದಾಳಿ ಮಾಡಿ, ಅವರವರ ಕೈಯಲ್ಲಿದ್ದ ಆಯುಧಗಳಿಂದ ಈ ಪ್ರಕರಣದ 1 ನೇ ಆರೋಪಿ ಮತ್ತು ಆ ಪ್ರಕರಣದ ಗಾಯಾಳು ಹಾಗೂ 8 ನೇ ಸಾಕ್ಷಿ ಚನ್ನೇಗೌಡನಿಗೆ ಚಾಕುವಿನಿಂದ ತಿವಿದು, ಹಲ್ಲೆ

ಮಾಡಿ ತೀವ್ರ ಸ್ವರೂಪದ ಗಾಯ ಉಂಟು ಮಾಡಿದ್ದಾರೆಂದರೆ ಸರಿಯಲ್ಲ. ಈ ಪ್ರಕರಣದ 4 ಮತ್ತು 6 ನೇ ಆರೋಪಿಗಳಾದ ಕೋಟಿ ಮುತ್ತುರಾಜು ಮತ್ತು ನಂದೀಶರವರ ಮೇಲೆ ನಾನು ಮತ್ತು ಎಸ್ ಸಿ 82/2017 ರ ಆರೋಪಿಗಳು ಹಲ್ಲೆ ಮಾಡಿ ಅವರ ಮರಣಕ್ಕೆ ಕಾರಣರಾಗಿದ್ದೇವೆ ಎಂದರೆ ಸರಿಯಲ್ಲ.

3. ನಮ್ಮ ಊರಿನ ಗೋಪಾಲ ಅಲಿಯಾಸ್ ದೊಡ್ಡೋನು ಮತ್ತು ಚನ್ನೇಗೌಡ ಬಿನ್ ಮಲ್ಲೇಗೌಡ ಈ ಪ್ರಕರಣದಲ್ಲಿ ಆರೋಪಿಗಳು ಅಲ್ಲ ಎಂದರೆ ಸರಿ. ಅವರಿಬ್ಬರೂ ಈ ಪ್ರಕರಣದ ಆರೋಪಿಗಳ ಪರವಾಗಿ ಎಸ್ ಸಿ 82/2017 ರಲ್ಲಿ ಸಾಕ್ಷಿ ಹೇಳಿದ್ದಾರೆಂದರೆ ಗೊತ್ತಿಲ್ಲ.

4. ಮದ್ದೂರಿನ ಆಗಿನ ವೃತ್ತ ನಿರೀಕ್ಷಕರು ಮತ್ತು ಆ ಪ್ರಕರಣದ ತನಿಖಾಧಿಕಾರಿಗಳಾದ ಕೆ.ಆರ್.ಪ್ರಸಾದ್ ರವರು ನನ್ನನ್ನು ದಿನಾಂಕ 30.12.2016 ರಂದು ವಶಕ್ಕೆ ಪಡೆದರು ಎಂದರೆ ಸರಿ. ದಿನಾಂಕ 25.12.2026 ರಿಂದ 30.12.2016 ರವರೆಗೆ ನಾನು ಊರಿನಲ್ಲಿ ಇರದೇ ತಲೆಮರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೆದರಿಕೊಂಡು ತೋಟದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಸದರಿ ತನಿಖಾಧಿಕಾರಿ ನನ್ನನ್ನು ವಶಕ್ಕೆ ಪಡೆದ ಬಳಿಕ ವಿಚಾರಣೆ ಮಾಡಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ಹೇಳಿಕೆಯನ್ನು ಸಿಐಡಿ ರವರು ಪಡೆದುಕೊಂಡಿದ್ದಾರೆಂದು ನುಡಿಯುತ್ತಾರೆ. ನಾನು ಈಗ ಒಂದು ದಾಖಲೆಯನ್ನು ನೋಡುತ್ತಿದ್ದೇನೆ, ಆ ದಾಖಲೆಯ ಮೂರನೇ ಪುಟದಲ್ಲಿರುವ ಸಹಿ ನನ್ನದೇ. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಲಾಯಿತು. ಕೆ.ಆರ್.ಪ್ರಸಾದ್ ರವರು ನನ್ನ ಹೇಳಿಕೆಯನ್ನು ದಿನಾಂಕ 30.12.2016 ರಂದು ದಾಖಲಿಸಿಕೊಂಡಿದ್ದಾರೆ, ಅದರಲ್ಲಿ ನಾನು 2 ನೇ ಪುಟದಲ್ಲಿ ಈಗ ಓದಿ ಹೇಳಿದಂತೆ ದಿನಾಂಕ 25.12.2016 ರಂದು ರಾತ್ರಿ.............ರಕ್ತ ಬಂದು ಕೆಳಗೆ ಬಿದ್ದು ಹೋದರು ಎಂದು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮೇಲೆ ಹೇಳಿದ ನಿಡಿ.2 ಹೇಳಿಕೆಯ ಅಂಶವನ್ನು ನಿರಾಕರಿಸಿದ ಕಾರಣ ಅದನ್ನು ನಿಡಿ.2 ಎ ಎಂದು ಗುರುತಿಸಲಾಯಿತು. ಎಸ್ ಸಿ 82/2017 ರಲ್ಲಿ ನಿಡಿ.2 ಹೇಳಿಕೆ ಮತ್ತು ಆ ಪ್ರಕರಣದ ದೋಷಾರೋಪಣಾ ಪಟ್ಟಿ ಮತ್ತು ಇತರ ಎಲ್ಲಾ ಲಗ್ತ ದಾಖಲೆಗಳನ್ನು ನನಗೆ ಆ ಪ್ರಕರಣದಲ್ಲಿ ವಿಚಾರಣೆಯ ಪೂರ್ವದಲ್ಲಿ ನೀಡಿದ್ದಾರೆಂದರೆ ಗೊತ್ತಿಲ್ಲ. ಆ ರೀತಿ ನಾನು ಹೇಳಿಕೆ ನೀಡಿರುವುದನ್ನು ಇವತ್ತಿನ ತನಕ ಅಲ್ಲಗಳೆದಿಲ್ಲ ಎಂದರೆ ಸರಿಯಲ್ಲ.

5. ನಾನು ಆ ಪ್ರಕರಣದಲ್ಲಿ ಎರಡು ತಿಂಗಳು ಒಂದು ವಾರ ಜೈಲಿನಲ್ಲಿ ಇದ್ದೆ. ನಾನು ಜಾಮೀನಿನಲ್ಲಿ ಹೊರಗೆ ಬಂದ ನಂತರ ನಿಡಿ.2 ರಲ್ಲಿ ನಮೂದಿಸಿದಂತೆ ಹೇಳಿಕೆ ನೀಡಿಲ್ಲ ಎಂದು ಯಾವುದೇ ಪ್ರಾಧಿಕಾರಕ್ಕೆ ದೂರು ನೀಡಿಲ್ಲ. ಸಿಐಡಿ ರವರ ಮುಂದೆ ಕೊಟ್ಟಿದ್ದೇನೆಂದು ಹೇಳಿದ ಹೇಳಿಕೆಯನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೇ ದಿನಾಂಕ 28.09.2017 ರಂದು ನೀಡಿದ್ದೇನೆಂದರೆ ಇರಬಹುದು. ದಿನಾಂಕ 25.12.2016 ರಿಂದ 28.09.2017 ರವರೆಗೆ ನಾನು ಊರಿನಲ್ಲಿಯೇ ಇದ್ದೆ. ಈ ಘಟನೆಗೆ ಸಂಬಂಧಪಟ್ಟ ವಿಚಾರವನ್ನು ನಾನು ಸಿಐಡಿರವರಿಗೆ ಬಿಟ್ಟು ಬೇರೆಯವರಿಗೆ ಹೇಳಿಲ್ಲ. ಪೊಲೀಸರು ನನ್ನನ್ನು ಬಂಧಿಸಿದ ಬಳಿಕ ನನ್ನನ್ನು ಅನಾವಶ್ಯಕವಾಗಿ ಬಂಧನಕ್ಕೆ ಒಳಪಡಿಸಿದರು, ನಾನು ಯಾವುದೇ ಕೃತ್ಯ ಎಸಗಿಲ್ಲ ಎಂದು ನಾನು ಯಾವುದೇ ಪ್ರಾಧಿಕಾರಕ್ಕೆ ದೂರು ನೀಡಿಲ್ಲ. ದಿನಾಂಕ 30.12.2016 ರಂದು ನಾನು ಹೇಳಿಕೆ ನೀಡಿದ್ದೇನೆಂದು ಸಿಐಡಿರವರಿಗೆ ಹೇಳಿಲ್ಲ. ದಿನಾಂಕ 24.12.2026 ರಿಂದ ಈವತ್ತಿನವರೆಗೆ ಮೀಸಲು ಪೊಲೀಸ್ ಪಡೆ ನಮ್ಮ ಊರು ತೊಪ್ಪನಹಳ್ಳಿಯಲ್ಲಿ ಕಾವಲು ಇದೆ ಎಂದರೆ ಸರಿ. ಈ ಪ್ರಕರಣದ 1 ರಿಂದ 3 ನೇ ಆರೋಪಿಗಳಿಗೆ ನಮ್ಮಿಂದ ಪ್ರಾಣ ಬೆದರಿಕೆ ಇದೆ ಎಂದು ಸರ್ಕಾರ ಅವರಿಗೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ರಕ್ಷಣೆ ನೀಡಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಅಭಿಯೋಜನೆ ನಡೆಸುವ ಅಭಿಯೋಜಕರಿಗೆ ಕೂಡ ನಮ್ಮಿಂದಿ ಬೆದರಿಕೆ ಇದೆ ಎಂದು ಸರ್ಕಾರದಿಂದ ಪೊಲೀಸ್ ರಕ್ಷಣೆ ಇದೆ ಎಂದರೆ ಗೊತ್ತಿಲ್ಲ.

6. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ "ಅದೇ ಸಮಯಕ್ಕೆ 1 ನೇ ಆರೋಪಿ ಚನ್ನೇಗೌಡ ಮಚ್ಚು ತೆಗೆದುಕೊಂಡು ಚಾಸಾ.1 ರವರಿಗೆ ಮುಂದುಗಡೆಯಿಂದ ತಲೆಯ ಮೇಲೆ ಹೊಡೆದ. ಕುಮಾರ 8 ನೇ ಆರೋಪಿ ಕಬ್ಬಿಣದ ರಾಡಿನಿಂದ ಚಾಸಾ.1 ರವರಿಗೆ ತಲೆಯ ಹಿಂಭಾಗಕ್ಕೆ ಹೊಡೆದ. ಆಗ ಚಾಸಾ.1 ಕೆಳಗೆ ಬಿದ್ದ. ಆಗ ಚಾಸಾ.1 ರವರ ಚಿಕ್ಕಪ್ಪನ ಮಕ್ಕಳಾದ ಚಾಸಾ.2 ಮತ್ತು ಚಾಸಾ.3 ಹೇಮಂತ ಮತ್ತು ಶಿವು ಚಾಸಾ.1 ರವರನ್ನು ಎತ್ತಿಕೊಳ್ಳಲು ಹೋದಾಗ ಅವರ ಮೇಲೆ ಕೂಡ ಮುತ್ತುರಾಜು ಅಲಿಯಾಸ್ ಷಡ್ಡು, ಉಳಿದ ಇಬ್ಬರು ಮುತ್ತುರಾಜ ಹೊಡೆದರು. ಆಗ ಚಾಸಾ.1 ರವರನ್ನು ಚಾಸಾ.2 ಮತ್ತು ಚಾಸಾ.3 ರವರು ಬೈಕಿನಲ್ಲಿ ಕೂರಿಸಿಕೊಂಡು ಆಸ್ಪತ್ರೆಗೆ ಹೋದರು" ಎಂಬ ಅಂಶವನ್ನು ನಾನು ಆ ಪ್ರಕರಣದ ತನಿಖಾಧಿಕಾರಿ ಕೆ.ಆರ್.ಪ್ರಸಾದ್ ರವರ ಮುಂದೆ ಮತ್ತು ಈ ಪ್ರಕರಣದ ತನಿಖಾಧಿಕಾರಿ ಸಿಐಡಿ ಪೊಲೀಸರ ಮುಂದೆ ಕೂಡ ಹೇಳಿಲ್ಲ ಎಂದರೆ ಸರಿಯಲ್ಲ.

7. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ "ಈ ಗಲಾಟೆ ನಡೆಯುವಾಗ ನಾನು ಯಾಕೆ ಗಲಾಟೆ ಮಾಡುತ್ತೀರಿ ಎಂದು ಕೇಳಿದಾಗ, 2 ನೇ ಆರೋಪಿ ಇವರನ್ನು ಸಾಯಿಸಬೇಕು,

ಲೈಟ್ ಆಫ್ ಮಾಡಿರಿ ಎಂದು ಹೇಳಿದ" ಎಂಬ ಅಂಶವನ್ನು ನಾನು ಆ ಪ್ರಕರಣದ ತನಿಖಾಧಿಕಾರಿ ಕೆ.ಆರ್.ಪ್ರಸಾದ್ ರವರ ಮುಂದೆ ಮತ್ತು ಈ ಪ್ರಕರಣದ ತನಿಖಾಧಿಕಾರಿ ಸಿಐಡಿ ಪೊಲೀಸರ ಮುಂದೆ ಕೂಡ ಹೇಳಿಲ್ಲ ಎಂದರೆ ಸರಿಯಲ್ಲ. ಸಿಐಡಿ ಪೊಲೀಸರ ಮುಂದೆ 1 ನೇ ಆರೋಪಿ ಚಾಸಾ.1 ರವರಿಗೆ ಮಚ್ಚಿನಿಂದ ಹೊಡೆದ ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ.

8. ನಾನು ಮತ್ತು ನಮ್ಮವರಿಂದ ಆದ ಹಲ್ಲೆಯಿಂದ ಈ ಪ್ರಕರಣದ 4 ಮತ್ತು 6 ನೇ ಆರೋಪಿಗಳಿಗೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು ಮತ್ತು ಈ ಪ್ರಕರಣದ 1 ನೇ ಆರೋಪಿ ಮತ್ತು ಎಸ್ ಸಿ 82/2017 ರ ಸಾಕ್ಷಿ ಚನ್ನೇಗೌಡರವರಿಗೆ ನಾವು ಮಾಡಿದ ಹಲ್ಲೆಯಿಂದ ತೀವ್ರವಾದ ಗಾಯವಾಯಿತು ಎಂದರೆ ಸರಿಯಲ್ಲ. ನಮ್ಮವರು ತಂದಂತಹ ಆಯುಧದಿಂದ ಅರಳೀಕಟ್ಟೆಯ ಬಳಿ ಶಾಂತವಾಗಿ ಕುಳಿತಿದ್ದ ನಿಶಸ್ತ್ರರಾದ ಈ ಪ್ರಕರಣದ ಆರೋಪಿಗಳಿಗೆ ಹಲ್ಲೆ ಮಾಡುವಾಗ ನಾವು ಬೀಸಿದ ಏಟಿನಿಂದ ನಮ್ಮವರಿಗೂ ಗಾಯವಾಯಿತು ವಿನಃ, ಈ ಪ್ರಕರಣದ ಆರೋಪಿಗಳು ಯಾರಿಗೂ ಯಾವುದೇ ಆಯುಧದಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

9. ಈ ಪ್ರಕರಣದ 1 ನೇ ಆರೋಪಿ ದೊಣ್ಣೆಯಿಂದ ಈ ಪ್ರಕರಣದ ಚಾಸಾ.1 ರವರಿಗೆ ಹಲ್ಲೆ ಮಾಡಿದ್ದಾನೆಂದು ಭಾವಿಸಿದರೂ ಅದು ಇನ್ನೂ ಹೆಚ್ಚಿನ ಅನಾಹುತ ಆಗಬಾರದೆಂದು ಹಾಗೂ ತಮ್ಮ ಸ್ವರಕ್ಷಣೆಗಾಗಿ ಈ ಪ್ರಕರಣದ 1 ನೇ ಆರೋಪಿ ಈ ಪ್ರಕರಣದ ಪಿರ್ಯಾದಿ ಮಾಡಿದ ಹಲ್ಲೆಯಿಂದ ತಪ್ಪಿಸಿಕೊಳ್ಳಲು ದೊಣ್ಣೆ ಬೀಸಿರಬಹುದಾಗಿದೆ ವಿನಃ, ಉದ್ದೇಶಪೂರ್ವಕವಾಗಿ ಈ ಪ್ರಕರಣದ ಸಾಕ್ಷಿಗಳಿಗೆ ಗಲ್ಲೆ ಮಾಡುವ ಉದ್ದೇಶದಿಂದ ಸದರಿ ದೊಣ್ಣೆಯನ್ನು ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮಹೇಂದ್ರನ ಕೈಯಲ್ಲಿ ಆ ಕಾಲಕ್ಕೆ ಯಾವುದೇ ಚಾಕು ಅಥವಾ ಹರಿತವಾದ ಆಯುಧ ಇರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಇದ್ದ ಬುಲೆರೋ ಗಾಡಿಯಲ್ಲಿ ಯಾವುದೇ ಆಯುಧಗಳು ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಇರುವ ಆರೋಪಿಗಳಿಗೆ ನಾವು ಮಾಡಿದ ಹಲ್ಲೆ ಮತ್ತು ಕೊಲೆಯಿಂದ ಆದ ಪ್ರಕರಣದಿಂದ ತಪ್ಪಿಸಿಕೊಳ್ಳಲು ನಾನು ಮತ್ತು ಆ ಪ್ರಕರಣದ ಉಳಿದ ಆರೋಪಿಗಳು ತಡವಾಗಿ ಈ ಆರೋಪಿಗಳ ವಿರುದ್ಧ ರಾಜಕೀಯ ಪ್ರಭಾವ ಬೀರಿ, ಮೊಕದ್ದಮೆ ಹೂಡಿಸಿ, ಒಂದು ಆರೋಪ ಹೊರಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ *5 , 7* ರಿಂದ *14* ನೇ ಆರೋಪಿತರ ಪರ ಶ್ರೀ ಹೆಚ್ ಎಂ ಎನ್ ವಕೀಲರಿಂದಃ**

1 ರಿಂದ 3 ನೇ ಆರೋಪಿ ಪರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.